

# ಜನರ ಕಾಮಾಸಕ್ತಿ ಕುಂದುತ್ತಿದೆಯೇ?

**ಶಯನಾಗೃಹಗಳಲ್ಲಿ ಲೈಂಗಿಕ ನಿರುತ್ಸಾಹಕ್ಕೆ ಪ್ರತಿಯೊಬ್ಬರಿಗೂ ಭಿನ್ನ ಕಾರಣಗಳಿರುತ್ತವೆ. ಆದರೆ ಒಟ್ಟಾರೆ ಸಮೀಕ್ಷೆಯಲ್ಲೂ, ನಮ್ಮ ಯುವಜನರಲ್ಲಿ ಕಾಮಾಸಕ್ತಿ ಕುಗ್ಗುತ್ತಿದೆ ಎನ್ನುವ ಅಂಶ ಪ್ರಮುಖವಾಗಿದೆ. ಇದಕ್ಕೇನು ಪರಿಹಾರ?**

■ **ಎಸ್.ಪಿ. ಶ್ಯಾನಭಾಗ**

ಚಿತ್ರ: ಈಶ್ವರ್ ಬಡಿಗೇರ

ಊಟ, ನಿದ್ದೆ ಹಾಗೂ ಮೈಥುನಗಳಲ್ಲಿ ಮನುಷ್ಯನಿಗೂ ಪಶುಗಳಿಗೂ ವ್ಯತ್ಯಾಸವಿಲ್ಲ ಎನ್ನುವುದು ತಜ್ಞರ ಮಾತು. ಲೈಂಗಿಕ ಕ್ರಿಯೆಯ ಮೂಲೋದ್ದೇಶ ಸಂತಾನಾಭಿವೃದ್ಧಿಯೇ ಆದರೂ ದೈನಂದಿನ ನೀರಸ ಕೆಲಸಗಳ ಏಕತಾನತೆಯಲ್ಲಿ, ಅವುಗಳಿಂದ ಉಂಟಾಗುವ ಹತ್ತು ಹಲವು ಜಂಜಾಟಗಳಲ್ಲಿ, ಆಗಾಗ ಎದುರಾಗುವ ತಪ್ಪು ಒಪ್ಪುಗಳ ನಿರ್ಣಯದ ಗೋಜಲುಗಳಲ್ಲಿ, ಪರಸ್ಪರರಲ್ಲಿಯ ಭಾವನೆಗಳ ತಾಕಲಾಟಗಳಲ್ಲಿ ಮನುಷ್ಯ ಕಳೆದು ಹೋದಾಗ, ಮೈ, ಮನಸ್ಸನ್ನು ಪ್ರಚೋದಿಸಿ, ಕೆರಳಿಸಿ, ಅರಳಿಸಿ 'ಜೀವನದಲ್ಲಿ ಇನ್ನೂ ಏನೋ ಇದೆ' ಅನ್ನುವಂತಹ ಚೇತೋಹಾರಿ ಭಾವಕ್ಕೆ ಬುನಾದಿಯಾಗುವುದು ಲೈಂಗಿಕ ಕ್ರಿಯೆ.

ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಅವಲೋಕಿಸಿದರೆ, ಲೈಂಗಿಕತೆಯ ವಿಷಯವಾಗಿ ಜನರು ಆರೋಗ್ಯಕರ ಹಾಗೂ ಸಂತೃಪ್ತದಾಯಕ ಜೀವನವನ್ನೇ ನಡೆಸುತ್ತಿದ್ದಾರೆ ಎಂದು ಹೇಳಬಹುದು. ಆದರೆ ಈ ವಿಷಯದಲ್ಲಿ ನಡೆದ ಸಮೀಕ್ಷಾ ವರದಿ ನಮ್ಮ ಅನಿಸಿಕೆಗಳಿಗೆ ವ್ಯತಿರಿಕ್ತವಾಗಿದೆಯೆಂದರೆ ಅಚ್ಚರಿ ಪಡಬೇಡಿ. ಕಳೆದ ಮಾರ್ಚ್ ತಿಂಗಳಲ್ಲಿ ಪ್ರಕಟಿಸಿದ ಲೈಂಗಿಕತೆ ಕುರಿತ ಅಂತರರಾಷ್ಟ್ರೀಯ ಅಕಾಡೆಮಿಯ ವರದಿಯಲ್ಲಿ, ಅಮೆರಿಕಾದ ಸಂಶೋಧಕರಾದ ಜೀನ್ ಟ್ವೆಂಗ್, ರೀನ್ ಶರ್ಮನ್ ಹಾಗೂ ಬ್ರೂಕ್ ವೆಲ್ಸ್ ಅವರು '1990ಕ್ಕೆ ಹೋಲಿಸಿದರೆ 2010ನೇ ವರ್ಷದಲ್ಲಿ ಅಮೆರಿಕನ್ನರ ಲೈಂಗಿಕಾಸಕ್ತಿ ಶೇ.9ರಷ್ಟು ಕಡಿಮೆಯಾಗಿದೆ' ಎಂದು ಬೊಟ್ಟು ಮಾಡಿದ್ದಾರೆ. ವರ್ಷದಲ್ಲಿ ಸರಾಸರಿ 62 ಬಾರಿ ಮಿಲನೋತ್ಸವವನ್ನು ನಡೆಸುವ ಅಮೆರಿಕನ್ನರು ಇದೀಗ ಕೇವಲ 53 ಬಾರಿ ನಡೆಸುತ್ತಿದ್ದಾರಂತೆ. ಲಿಂಗ, ಧರ್ಮ, ವಿದ್ಯೆ ಹಾಗೂ ಉದ್ಯೋಗದ ಮಟ್ಟವನ್ನು ಇಲ್ಲಿ ಪರಿಗಣಿಸದೇ ಎಲ್ಲರನ್ನೂ ಒಳಗೊಂಡ ಸಂಶೋಧನೆ ಅದಾಗಿತ್ತು.

ಸಮೀಕ್ಷೆ ಹೊರಗೆಡವಿದ ಇನ್ನೂ ಅಚ್ಚರಿಯ ವಿಷಯವೆಂದರೆ, ಈ ಲೈಂಗಿಕಾಸಕ್ತಿ ಹೆಚ್ಚು ಕುಂಠಿತವಾದದ್ದು ವಿವಾಹಿತರಲ್ಲಿ! 2014ರಲ್ಲಿ ನಡೆಸಿದ ಆಸ್ಟ್ರೇಲಿಯಾದ ಲೈಂಗಿಕ ಚಟುವಟಿಕೆ ಕುರಿತಾದ ರಾಷ್ಟ್ರೀಯ ಸಂಶೋಧನೆಯ ಪ್ರಕಾರ, ಪ್ರತಿವಾರ ನಡೆಸುತ್ತಿದ್ದ ಜನರ ಮೈಥುನಕ್ರಿಯೆ ಹತ್ತು ವರ್ಷಗಳಿಂದೀಚೆಗೆ 1.8 ರಿಂದ 1.4ಕ್ಕೆ ಇಳಿದಿತ್ತು. ಜಪಾನಿನಲ್ಲಿ ನಡೆಸಿದ ಅಧ್ಯಯನ ಇನ್ನೂ ಗಾಬರಿಗೊಳಿಸುವಂತಿದೆ. ಅಲ್ಲಿ 16 ರಿಂದ 25 ವರ್ಷಗಳ ನಡುವಿನ ವಯೋಮಾನದ ಶೇ.46 ರಷ್ಟು ಮಹಿಳೆಯರು ಹಾಗೂ ಶೇ. 25ರಷ್ಟು ಪುರುಷರು ಲೈಂಗಿಕ ಕ್ರಿಯೆಯ ಬಗ್ಗೆ ಆಸಕ್ತಿಯನ್ನೇ ಹೊಂದಿಲ್ಲ!

ವಾತ್ಸಾಯನನ ನಾಡಾದ ಭಾರತದಲ್ಲೂ ಈ ಇಳಿಕೆ ಹೀಗೆಯೇ ಮುಂದುವರಿದಿದೆ. ಪುರುಷರ ಜೀವನಶೈಲಿಯ ಕುರಿತಾದ ಪ್ರಸಿದ್ಧ ನಿಯತಕಾಲಿಕವೊಂದರ ಅಧ್ಯಯನದ ಪ್ರಕಾರ, ಅನ್ಯ ದೇಶಗಳ ಜನರಿಗೆ ಹೋಲಿಸಿದರೆ ಭಾರತೀಯರಿಗೆ ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿ ತೀರಾ ಕಡಿಮೆ. ಅವರಿಗೆ ಲೈಂಗಿಕ ಆಟಿಕೆಗಳನ್ನು ಉಪಯೋಗಿಸುವುದಕ್ಕೆ ಮುಜುಗರ, ನಾಚಿಕೆ, ಭಯ! ಸಂಭೋಗ ನಡೆಸುವ ಮುನ್ನ ಅನುಸರಿಸುವ ಪ್ರೇಮ– ಪ್ರಣಯದಾಟ ಚುಂಬನ ಹಾಗೂ ಆಲಿಂಗನದ ಪರಿಧಿಯನ್ನೂ ಅವರು ಮೀರುವುದಿಲ್ಲ. ಇತ್ತೀಚೆಗೆ ನಡೆಸಿದ ಅಧ್ಯಯನವೊಂದರ ಪ್ರಕಾರ, ಭಾರತೀಯರಲ್ಲೂ ಹಿಂದಿನ ತಲೆಮಾರಿನ ಯುವಕರಿಗಿಂತ ಇಂದಿನ ಯುವ ಜನಾಂಗದಲ್ಲಿ ಲೈಂಗಿಕಾಸಕ್ತಿ ಕಡಿಮೆ ಎಂದು ಹೇಳಲಾಗಿದೆ.

## ಏಕೆ ಹೀಗಾಗುತ್ತಿದೆ?

ಲೈಂಗಿಕ ತಜ್ಞರು, ಸಲಹೆಗಾರರು ಹಾಗೂ ಮನೋವೈದ್ಯರ ಪ್ರಕಾರ ಶಯನಾಗೃಹದಲ್ಲಿಯ ಲೈಂಗಿಕ ನಿರುತ್ಸಾಹಕ್ಕೆ ಕಾರಣಗಳು ಹತ್ತು–ಹಲವಾರು. ಮುಂಬೈಯಲ್ಲಿ ಕೆಲಸ ಮಾಡುತ್ತಿರುವ ಮನೋವೈದ್ಯ ಹಾಗೂ ಲೈಂಗಿಕ ಸಲಹೆಗಾರ ಡಾ.ರಾಜೀವ್ ಆನಂದ್ ಹೇಳಿಕೆಯ ಪ್ರಕಾರ, ಇಂದು ಸೆಕ್ಸ್ ಅನ್ನುವಂತಹದ್ದು ತನ್ನ ಪ್ರಾಮುಖ್ಯತೆಯನ್ನು ಕ್ರಮೇಣ ಕಳೆದುಕೊಳ್ಳುತ್ತಿದೆ.